ಶ್ರೀ ಹೆಚ್.ಸಿ. ಬಾಲಕೃಷ್ಣ : ಬೆಳಗ್ಗೆ 1 ಗಂಟೆ ಕಾಲಾವಕಾಶ ಕೊಡಿ ಸಾಕು.

ಅಧ್ಯಕ್ಷರು : one hour ಕೊಡುವುದಕ್ಕೆ ಕಷ್ಟವಾಗಿಉತ್ತದೆ.

ಶ್ರೀ ಬಂಡೆಪ್ಪ ಖಾಶೆಂಪೂರ್: one hour ಬೇಡ. ಮೊದಲ 10–15 ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಚರ್ಚೆ ಪ್ರಾರಂಭ ಮಾಡಿದರೆ ಅದು ಬೇಗ ಮುಗಿಯುವುದಿಲ್ಲ. Please, ಸಹಕಾರ ಕೊಡಿ. ಎಲ್ಲರಿಗೂ ಬಜೆಟ್ ಮೇಲೆ ಮಾತನಾಡಲಿಕ್ಕೆ ಹೆಚ್ಚು ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಅವಕಾಶ ಎಲ್ಲರಿಗೂ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾಳೆ ಬೆಳಗ್ಗೆ ಅರ್ಧ ಗಂಟೆ ಕಾಲಾವಕಾಶ ಕೊಡಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಅರ್ಧ ಗಂಟೆ ಕಾಲಾವಕಾಶ ಕೊಡಿ ಸರ್. ಜಾಸ್ತಿ ಏನೂ ಬೇಡ.

ಅಧ್ಯಕ್ಷರು : ಆಯಿತು. ಅರ್ಧ ಗಂಟೆ ಕೊಡುತ್ತೇನೆ.

6. ಪ್ರಕಟಣೆ

ಅಧ್ಯಕ್ಷರು : ಕಾಮನ್‌ವೆಲ್ತ ಸಂಸದೀಯ ಸಂಘ (ಕರ್ನಾಟಕ ಶಾಖೆ) ಯ ವಾರ್ಷಿಕ ಸಾಮಾನ್ಯ ಸಭೆಯು ಈ ದಿನ ಅಂದರೆ ಸೋಮವಾರ 11.2.2013ರಂದು ಸಂಜೆ 6–00 ಗಂಟೆಗೆ ವಿಧಾನಸಭೆಯ ವಿರೋಧ ಪಕ್ಷದ ಮೊಗಸಾಲೆಯಲ್ಲಿ ಜರುಗಲಿದ್ದು ಅದರಲ್ಲಿ ಎಲ್ಲಾ ಮಾನ್ಯ ಸಚಿವರುಗಳು ಮತ್ತು ಸದಸ್ಯರುಗಳು ಭಾಗವಹಿಸಬೇಕೆಂದು ಕೋರುತ್ತೇನೆ.

ಈಗ ಸದನವನ್ನು ನಾಳೆ ಬೆಳಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ,